ಶ್ರೀ ಎನ್. ಹಂಚ್ಚಮಾಸ್ತಿಗೌಡ .—ಮಾನ್ಯ ಸಭೆಗೆ ಗೊತ್ತಿರುವ ಹಾಗೆ ಇದರ ಬಗ್ಗೆ ಎರಡೂವರೆ ಗಂಟೆ ಚರ್ಚೆಯಾಗಿ ಉತ್ತರ ಕೊಟ್ಟಿದ್ದೇನೆ. ಅದರ ಜೊತೆಗೆ ಎಲ್ಲೆಲ್ಲಿ ಏನೇನು ತೊಂದರೆಗಳು ಇವೆ, ಅದರ ಬಗ್ಗೆ ಸರ್ಕಾರ ಇತ್ತೀಚೆಗೆ ಏನು ಮಾಡಿದೆ, ಮತ್ತು ಸರ್ಕಾರದವರು ಏನು ಕಾರ್ಯಕ್ರಮ ಹಾಕಿಕೊಂಡಿದ್ದಾರೆ ಎಂಬುದರ ಬಗ್ಗೆ ವಿಶದವಾಗಿ ತಿಳಿಸುವುದಕ್ಕೆ ಎರಡು ಮೂರು ದಿವಸ ಅವಕಾಶ ಕೊಡಬೇಕೆಂದು ಹೇಳಿದ್ದೇನೆ. ಹಾಗೆ ಅವಕಾಶ ಕೊಟ್ಟರೆ, ಅದರ ಒಗ್ಗೆ ಈ ಸಭೆಗೆ ಒಂದು ಹೇಳಿಕೆಯನ್ನು ಮಾಡಬಹುದು.

SRI H. S. SIDDAPPA (Arsikere) .—My apprehension in this respect is dose the Government have any money to do this or simply give a statement ?

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ) :— ಮಾನ್ಯ ಮಂತ್ರಿಯವರು ಇದರ ಬಗ್ಗೆ ಮೂರು ದಿವಸಗಳ ಸಮಯ ಹೇಳುವುದರ ಬದಲು ಆ ಪ್ರದೇಶಕ್ಕೆ ಖುದ್ದಾಗಿ ಅವರೇ ಭೇಟಿ ನೀಡಿ ಅಲ್ಲಿರತಕ್ಕಂತಹ ಪರಿಸ್ಥಿತಿಯನ್ನು ನೋಡಿಕೊಂಡು ಬುದು, ಎರಡು ದಿವಸ ತಡವಾಗಲಿ, ಏಕೆ ಅದನ್ನು ಪಾತ್ರಿಪಡಿಸಿಕೊಂಡು ಹೇಳಿಕೆ ಕೊಡಬಾರದು ?

ಅಧ್ಯಕ್ಷರು .—ಎಲ್ಲರೂ ಎದ್ದು ನಿಂತುಕೊಂಡು ಹೇಳುತ್ತಾ ಹೋದರೆ ಹೇಗೆ ? ಯಾರಾದರೂ ಒಬ್ಬರು ಹೇಳಿದರೆ ಸಾಕಾಗುತ್ತದೆ.

Termination of Servius in the Food and Civil Supplies Department

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ) .—ತಮ್ಮ ಗಮನಕ್ಕೆ ಒಂದು ವಿಚಾರವನ್ನು ತರಬಯಸುತ್ತೇನೆ. ಒಂದನೆಯದು ಏನೆಂದರೆ ನಿನ್ನೆಯ ದಿವಸ ವುಡ್ ಅಂಡ್ ಸಿವಿಲ್ ಸಪ್ಲೈಸ್ ಇಲಾಖೆಯಲ್ಲಿ ಜನ ಕ್ಲಾಸ್ ೪ ನೌಕರರನ್ನು ಕೆಲಸದಿಂದ ಟರ್ಮಿನೇಟ್ ಮಾಡಿದ್ದಾರೆ. ಅದರ ಬಗ್ಗೆ ತಮಗೂ ಒಂದು ಪತ್ರ ಕಳಿಸಿದ್ದೇನೆ.

ಅಧ್ಯಕ್ಷರು :—ಆ ವಿಷಯ ಈಗ ಹೇಗೆ ಎತ್ತುತ್ತೀರಿ ? ನಾನು ಇಲ್ಲಿಗೆ ಬರುವಾಗ ತಾವು ಆ ಕಾಗದ ನನಗೆ ಕೊಟ್ಟಿದ್ದೀರಿ ಅಷ್ಟೆ. ಈಗ ಚಟಕ್ಕನೆ ನಿಂತು ಬಿಟ್ಟರೆ ಅದಕ್ಕೆ ಉತ್ತರ ಕೊಡುವವರು ಯಾರು ? ಸುಮ್ಮನೆ ಕಾಲವನ್ನು ತೆಗೆದುಕೊಳ್ಳುವುದರಲ್ಲಿ ಅರ್ಥವಿಲ್ಲ. ತಾವು ಏನಾದರೂ ಇಲ್ಲಿ ಕೇಳಿದರೆ ಅದಕ್ಕೆ ಪರಿಹಾರ ಸಿಗಬೇಕು. ಮಂತ್ರಿಯವರಿಗೆ ಇದರ ಬಗ್ಗೆ ನೋಟೀಸ್ ಕೊಟ್ಟಿಲ್ಲವಾದ್ದರಿಂದ ಅವರಿಗೆ ವಿಚಾರ ಏನೆಂದು ಗೊತ್ತಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್ .—ನಾನು ಹೇಳುತ್ತಿರುವುದು ೨೮ನೇ ತಾರೀಕಿಗೆ ನೋಟೀಸ್ ಕೊಟ್ಟು ಒಂದನೇ ತಾರೀಕಿನಿಂದ ಕೆಲಸಕ್ಕೆ ಬರಬೇಡಿ ಎಂದು ಹೇಳಿದರೆ ಇದು ಯಾವ ನ್ಯಾಯ ? ಇದಕ್ಕೆ ನೀತಿಯಿದೆಯೇ, ಧರ್ಮ ಇದೆಯೇ ಎಂದು ಕೇಳುತ್ತೇನೆ. ನೀವು ಮನೆಗೆ ಹೋಗಿ ಎಂದು ಸರ್ಕಾರಿ ಆಜ್ಞೆಯೂ ಮಾಡಿದ್ದಾರೆ. ಆ ಜನರು ೪-೫ ವರ್ಷಗಳ ಕಾಲ ಕೆಲಸ ಮಾಡಿ ಈಗ ಮನೆಗೆ ಹೋಗಿ ಎಂದು ಹೇಳಿದರೆ ಅವರು ಏನು ಮಾಡಬೇಕು ? ಆದ್ದರಿಂದ ಅವರನ್ನು ಕೆಲಸದಿಂದ ತೆಗೆದು ಹಾಕದ ಹಾಗೆ ಏನು ವ್ಯವಸ್ಥೆ ಮಾಡಬೇಕೋ ಅದನ್ನು ಮಾಡಬೇಕೆಂದು ತಮ್ಮ ಮೂಲಕ ಸರ್ಕಾರದಲ್ಲಿ ವಿನಂತಿಸಿಕೊಳ್ಳುತ್ತೇನೆ. At least they should be retained. That is my request.

Asitation by the students of the Mysore Engineering Collage

ಶ್ರೀ ಎಂ. ಎಸ್. ಕೃಷ್ಣನ್ .—ಅದೇ ರೀತಿಯಲ್ಲಿ ಇನ್ನೊಂದು ವಿಷಯ ಹೇಳುತ್ತೇನೆ. ಮಾನ್ಯ ವಿದ್ಯಾ ಮಂತ್ರಿಯವರ ಗಮನಕ್ಕೆ ಈ ವಿಚಾರವನ್ನು ತರುತ್ತೇನೆ. ಮೈಸೂರಿನಿಂದ ಇಂಜಿನಿಯರಿಂಗ್ ಕಾಲೇಜ್ ವಿದ್ಯಾರ್ಥಿಗಳ ಒಂದು ಟೆಲಿಗ್ರಾಂ ಬಂದಿದೆ. ಅದು ಈ ರೀತಿ ಇದೆ.

> "One boy's condition is bad kindly help Mysore Engineering College Students."

I do not want to get into the merits of their agitation. But the condition of the boy is very bad. It is necessary for the Education Minister to bestow his attention to this matter.

ಅಧ್ಯಕ್ಷರು .—ಹೀಗೆ ಟೆಲಿಗ್ರಾಮುಗಳನ್ನು ಎಲ್ಲವನ್ನೂ ಕಳಿಸಿಕೊಡುವುದಾದರೆ ಒಂದು ಸಾವಿರದ ಐನೂರು ಆಗುತ್ತದೆ. ಅದರ ಬಗ್ಗೆ ನಾನು ಆಗಲೇ ಹೇಳಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್ .—ತಾವು ಹೀಗೆ ಅಸಮಾಧಾನವಾಗುವ ರೀತಿಯಲ್ಲಿ ಮಾತನಾಡುವುದು ಒಳ್ಳೆಯದಲ್ಲ. ತಾವು ಒಂದು ಸಾವಿರದ ಐನೂರು ಆಗುತ್ತದೆಂದು ಹೇಳಿದರೆ ಹೇಗೆ ? ನಾವು ಏನಾದರೂ ಮುಖ್ಯವಾದ ವಿಚಾರಗಳನ್ನು ಮಾತ್ರ ಇಲ್ಲಿ ಹೇಳಬೇಕಾಗುತ್ತದೆ. ಅದರ ಬಗ್ಗೆ ಅವಕಾಶ ಕೊಡದಿದ್ದರೆ ಹೇಗೆ ?

ಅಧ್ಯಕ್ಷರು .—ಈ ಮನೆಯು ಮುಂದೆ ರೂಲ್ಸ್ ಪ್ರಕಾರ ಏನು ತರಬೇಕೋ ಹಾಗೆ ತಂದರೆ ಅದರ ಬಗ್ಗೆ ಏನಾದರೂ ಸರ್ಕಾರದವರು ಹೇಳುವುದಕ್ಕಾಗುತ್ತದೆ. ಅದು ಬಿಟ್ಟು ಈ ರೀತಿ ಫಕ್ಕನೆ ಎದ್ದು ಹೇಳುತಾ ಹೋದರೆ ಕಷ್ಟವಾಗುತ್ತದೆ. ನಾನು ತೆಗೆದುಕೊಂಡ ಬಂದಿದ್ದೇನೆ ನೀವು ಬೇಕಾದ್ದು ಮಾಡಿಕೊಳ್ಳಿ ಅಂದರೆ ನಾನು ಏನು ಮಾಡಲಿ ? ಅದಕ್ಕೆ ಒಂದು ಕ್ರಮ ರೀತಿ ನೀತಿಗಳು ಇರುತ್ತವೆ. ಅದರ ಪ್ರಕಾರ ಮಾಡಬೇಕಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.— ನಿನ್ನೆ ರಾತ್ರಿ ನನಗೊಂದು ಟೆಲಿಗ್ರಾಂ ಬಂತು ಒಬ್ಬ ಹುಡಗನ ಕಂಡೀಷನ್ ಬಹಳವಾಗಿ ಕೆಟ್ಟುಹೋಗಿದೆ ಎಂದು ಹೇಳತ್ತಾರೆ. ನಾನು ಅದನ್ನು ತಮಗೆ ಕಳುಹಿಸಬೇಕೆಂದಿದ್ದೇನೆ. ಆದಷ್ಟು ಬೇಗನೆ ಸರ್ಕಾರದವರು ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ತಮಗೆ ಕಳುಹಿಸಿಕೊಟ್ಟಿದ್ದೇನೆ. ಅವನ ಪರಿಸ್ಥಿತಿ ಕೆಟ್ಟುಹೋದರೆ, ವಿದ್ಯಾರ್ಥಿಗಳು ಸುಮ್ಮನೆ ಇರುವುದಿಲ್ಲ. ಆದ್ದರಿಂದ ಆ ವಿಚಾರದಲ್ಲಿ ಕ್ರಮ ತೆಗೆದುಕೊಳ್ಳಬೇಕು.

SRI K. H. PATIL.— If the condition of the boy is really very bad as apprehended by our Hon. Friend Sri M. S. Krishnan the Government will never come in the way. He has got a right to get a Doctor and get treatment. We will very much sympathise with the boy. Let him first get the treatment and get himself ready.

MADAM SPEAKER.— If the condition of the boy is bad, I request the hon. member to help him.

ಶ್ರೀ ಎಂ. ಎಸ್. ಕೃಷ್ಣನ್.— ಮಂತ್ರಿಗಳು ಡಾಕ್ಟರ್ ಹತ್ತಿರ ಹೋಗಲಿ ಎಂದು ಏಕೆ ಹೇಳಬೇಕು? ಇದಕ್ಕೇನೋ ಬ್ಯಾಕ್‌ಗ್ರೌಂಡ್ ಇದೆ.

PRIVATE MEMBERS' BILLS.

The Mysore Payment of Subsistance Allowance Bill, 1972.

LEAVE TO INTRODUCE.

SRI M. S. KRISHNAN (Malleswaram).— Madam, I beg leave of the House to introduce.

"The Mysore Payment of Subsistance Allowance Bill, 1972."

MADAM SPEAKER.— The question is.

"That leave be granted to introduce the Mysore Payment of Subsistance Allowance Bill, 1972."